# ಜೈನಧರ್ಮದ ಮೂಲ ತತ್ತ್ವ ಮತ್ತು ಅನುಷ್ಠಾನ ವೇದಾಂತ

**ಸ್ವಾಮಿ ಬ್ರಹ್ಮೇಶಾನಂದ**

"ವೇದಾಂತ ಕೇಸರಿ" ಎಂಬ ಆಂಗ್ಲ ಪತ್ರಿಕೆಯ ಸಂಪಾದಕರಾಗಿದ್ದ ಸ್ವಾಮಿ ಬ್ರಹ್ಮೇಶಾನಂದಜಿಯವರು ಈಗ ಚಂಡೀಘರ್‌ನಲ್ಲಿರುವ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದಾರೆ. ಜೈನಧರ್ಮದ ಕಿರುಪರಿಚಯ ಮತ್ತು ವೇದಾಂತದೊಡನಿರುವ ಅದರ ಸಂಬಂಧ ಕುರಿತಾದ ಅವರ ಈ ಲೇಖನವನ್ನು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿದವರು ಶ್ರೀಮತಿ ಎಂ.ಗೌರಿ.

ಜೈನಧರ್ಮವು ವಿಶ್ವದ ಪ್ರಾಚೀನವಾದ ಮುಖ್ಯ ಧರ್ಮಗಳಲ್ಲೊಂದು. ಹಿಂದೂಧರ್ಮದ ಕರ್ಮಕಾಂಡ ಹಾಗೂ ಯಜ್ಞಗಳಲ್ಲಿ ಧರ್ಮದ ಹೆಸರಿನಲ್ಲಿ ನಡೆಸುವ ಪಶುಬಲಿಯನ್ನು ವಿರೋಧಿಸುವ ರೂಪದಲ್ಲಿ ಜೈನಧರ್ಮದ ಉದ್ಭವವಾಯಿತೆಂಬುದು ಹಲವು ವಿದ್ವಾಂಸರ ಅಭಿಪ್ರಾಯ. ಜೈನ ಪೌರಾಣಿಕ ಕಥೆಗಳಲ್ಲಿ ಪಶುಬಲಿಯನ್ನು ವಿರೋಧಿಸುವಂತಹ ಈ ಪ್ರಯತ್ನಗಳ ಸಂಕೇತಗಳೂ ಕಂಡುಬರುತ್ತವೆ. ಜೈನಧರ್ಮವು ಹಿಂದೂಧರ್ಮಕ್ಕಿಂತ ಪ್ರಾಚೀನವಲ್ಲದಿದ್ದರೂ ಅದಕ್ಕೆ ಸಮಕಾಲೀನವಾಗಿ ಭಾರತದಲ್ಲಿ ಪ್ರತಿಷ್ಠಿತವಾಯಿತು ಹಾಗೂ ಜನಪ್ರಿಯವಾಯಿತೆಂದು ಇತರ ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ವಿದ್ವಾಂಸರ ಅನುಸಾರ ಭಾರತದಲ್ಲಿ ಅತಿ ಪ್ರಾಚೀನ ಕಾಲದಿಂದಲೂ ಸಂಸ್ಕೃತಿಯ ಈ ಎರಡೂ ಧಾರೆಗಳು ಸಮಾನಾಂತರ ರೂಪದಲ್ಲಿ ಹರಿದು ಬರುತ್ತಿವೆ. ಮೊದಲನೆಯದಾಗಿ ವೈದಿಕ ಅಥವಾ ಬ್ರಾಹ್ಮಣ ಸಂಸ್ಕೃತಿ ಹಾಗೂ ಎರಡನೆಯದಾಗಿ ಶ್ರಮಣ ಅಥವಾ ಮಾಗಧೀ ಸಂಸ್ಕೃತಿ. ಅದರಲ್ಲಿ ಮೊದಲನೆಯದು ಸಿಂಧೂ ನದಿಯ ತೀರದಲ್ಲಿ ಅಥವಾ ಆಧುನಿಕ ಅಭಿಪ್ರಾಯಕ್ಕನುಗುಣವಾಗಿ ಸರಸ್ವತೀ ನದಿಯ ತೀರದಲ್ಲಿ ಉದ್ಭವಿಸಿತು. ಇನ್ನೊಂದು (ಶ್ರಮಣ) ಮಗಧ್ ಅರ್ಥಾತ್ ಆಧುನಿಕ ಬಿಹಾರದಲ್ಲಿ ತಲೆ ಎತ್ತಿತು. ಈ ಎರಡೂ ಸಂಸ್ಕೃತಿಗಳಲ್ಲಿ ಕೆಲವು ಮೂಲ ಭಿನ್ನಾಭಿಪ್ರಾಯಗಳು ಇಲ್ಲಿಯವರೆಗೂ ಉಳಿದುಕೊಂಡಿವೆ. ಬ್ರಾಹ್ಮಣ ಅಥವಾ ಬ್ರಾಹ್ಮಣತ್ತ್ವವು ವೈದಿಕ ಸಂಸ್ಕೃತಿಯ ಕೇಂದ್ರವಾಗಿದ್ದರೆ ಶ್ರಮಣ — ಸಂನ್ಯಾಸಿ ಅಥವಾ ಭಿಕ್ಷು—ಶ್ರಮಣ ಸಂಸ್ಕೃತಿಯ ಆಧಾರವಾಗಿದೆ. ವೈದಿಕ ಸಂಸ್ಕೃತಿಯಲ್ಲಿ ಜೀವನ್ಮುಕ್ತಿಯನ್ನು ಜೀವನದ ಗುರಿಯೆಂದು ತಿಳಿಯಲಾಗಿದೆ. ಒಬ್ಬ ಗೃಹಸ್ಥನೂ ಕೂಡ ಜೀವನ್ಮುಕ್ತನಾಗಬಹುದು. ಅವನು ಮಂತ್ರದ್ರಷ್ಟಾರನಾದ ಋಷಿಯೂ ಆಗಿರುತ್ತಾನೆ. ಹಿಂದೂ ಶಾಸ್ತ್ರಗಳಲ್ಲಿ ಇಂತಹ ಗೃಹಸ್ಥ ಋಷಿಗಳ ಅನೇಕ ದೃಷ್ಟಾಂತಗಳನ್ನು ನಾವು ಕಾಣಬಹುದಾಗಿದೆ. ಶ್ರಮಣ ಸಂಸ್ಕೃತಿಯ ಅನುಸಾರವಾಗಿ ಮೋಕ್ಷಕ್ಕೆ ಸಂನ್ಯಾಸ ಅನಿವಾರ್ಯ ಹಾಗೂ ಎಲ್ಲ ಪ್ರಕಾರದ ಅಂದರೆ ಶಾರೀರಿಕ, ಮಾನಸಿಕ ಹಾಗೂ ವಾಚಿಕ ಕ್ರಿಯೆಗಳ ಮೇಲೆ ಪೂರ್ಣ ವಿಜಯವನ್ನು ಪಡೆದು ಕೊಂಡಿರುವ "ಅರ್ಹತ್" ಆದರ್ಶನು. ಬ್ರಾಹ್ಮಣ ಸಂಸ್ಕೃತಿಯಲ್ಲಿ ನಾಲ್ಕು ಪುರುಷಾರ್ಥಗಳಲ್ಲಿ ಧರ್ಮಕ್ಕೆ ಮಹತ್ತ್ವವನ್ನು ಕೊಡಲಾಗಿದೆ. ಆದರೆ ಶ್ರಮಣ ಸಂಸ್ಕೃತಿಯು ಮೋಕ್ಷಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತದೆ. ಜೈನಧರ್ಮ ಮತ್ತು ವೇದಾಂತದ ವಿಮರ್ಶಾತ್ಮಕ ವಿಶ್ಲೇಷಣೆಗಳನ್ನು ಅರ್ಥಮಾಡಿಕೊಳ್ಳಲು ಈ ಕೆಲವು ಮಹತ್ವ ಪೂರ್ಣ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಆವಶ್ಯಕ. ಹಾಗೂ ಬ್ರಾಹ್ಮಣ ಸಂಸ್ಕೃತಿ ಅಥವಾ ಹಿಂದೂ ಧರ್ಮ ಮತ್ತು ವೇದಾಂತ ಒಂದೇ ಅಲ್ಲವೆಂದೂ ತಿಳಿಯಬೇಕಾಗಿದೆ. ಇದೇ ರೀತಿ ಶ್ರಮಣ ಸಂಸ್ಕೃತಿ ಹಾಗೂ ಜೈನ ಧರ್ಮವೂ ಒಂದೇ ಅಲ್ಲ. ಎರಡನೆಯದಾಗಿ, ವೇದಾಂತ ಮತ್ತು ಜೈನಧರ್ಮ ಎರಡೂ ದಾರ್ಶನಿಕ ಮತ್ತು ವ್ಯಾವಹಾರಿಕ ಕ್ಷೇತ್ರದಲ್ಲಿವೆ. ಕೆಲವು ವಿಷಯಗಳಲ್ಲಿ ಎರಡರಲ್ಲಿ ಸಮಾನತೆ ಇದೆ ಮತ್ತು ಕೆಲವು ವಿಷಯಗಳಲ್ಲಿ ಅಂತರವಿದೆ.

ಒಂದು ವೇಳೆ ನಾವು ಜೈನಧರ್ಮದ ಐತಿಹಾಸಿಕ ವಿರೋಧವು ಹಿಂದೂಧರ್ಮದ ಕರ್ಮಕಾಂಡದ ಬಗ್ಗೆ ಎಂದೂ ಅದು ಕೇವಲ ಬ್ರಾಹ್ಮಣತ್ವದ ವಿರೋಧಿ ಎಂದೂ, ಒಪ್ಪಿಕೊಂಡರೆ ಉಪನಿಷತ್ತಿನಲ್ಲಿ ಹೇಳಲಾಗಿರುವ ಸಿದ್ಧಾಂತಗಳಿಗೆ ಜೈನಧರ್ಮದ ವಿರೋಧವಿರಲಾರದು. ಸ್ವತಃ ಉಪನಿಷತ್ತುಗಳಲ್ಲಿ ವೇದಗಳ ಕ್ರಿಯಾಪ್ರಧಾನವಾದ ಕರ್ಮಕಾಂಡಗಳನ್ನು ನಿಂದಿಸಿ ಆತ್ಮವು ಚೈತನ್ಯಸ್ವರೂಪ ಹಾಗೂ ಅದರ ಸಾಕ್ಷಾತ್ಕಾರ ಅಥವಾ ಮೋಕ್ಷವೇ ಜೀವನದ ಗುರಿ ಎಂದು ಪ್ರತಿಪಾದಿಸಲಾಗಿದೆ. ಈ ಮೂಲಭೂತ ಸಿದ್ಧಾಂತದೊಂದಿಗೆ ಜೈನಧರ್ಮದ ಯಾವ ಮತಭೇದವೂ ಇರಲು ಸಾಧ್ಯವಿಲ್ಲ.

## ಜೈನಧರ್ಮದ ಮೂಲಭೂತ ಸಿದ್ಧಾಂತ ಹಾಗೂ ವೇದಾಂತ

ಮಾನವ ಹಾಗೂ ಇತರ ಎಲ್ಲ ಜೀವ ಜಂತುಗಳಲ್ಲೂ ವಾಸ್ತವಿಕವಾಗಿ ಇರುವುದು ಆತ್ಮವಸ್ತುವೆಂದು ಜೈನಧರ್ಮ ಹಾಗೂ ವೇದಾಂತಗಳು ಸ್ಪಷ್ಟಪಡಿಸಿವೆ. ಈ ಆತ್ಮವು ದೇಹ, ಮನಸ್ಸು, ಪ್ರಾಣ ಇತ್ಯಾದಿ ಜಡವಸ್ತುಗಳಿಂದ ಭಿನ್ನವಾಗಿದೆ. ಜಡವಸ್ತುವನ್ನು ಜೈನಧರ್ಮದಲ್ಲಿ "ಪುದ್ಗಲ" ಎಂದು

ಕರೆಯಲಾಗಿದೆ. ವೇದಾಂತದ ಅನುಸಾರ ಜೀವಾತ್ಮನು ಅವಿದ್ಯೆ ಅಥವಾ ಅಜ್ಞಾನದ ಕಾರಣದಿಂದ ದೇಹದೊಂದಿಗೆ ಒಂದಾಗಿ ತನ್ನ ನಿಜಸ್ವರೂಪವನ್ನು ಮರೆತುಬಿಡುತ್ತಾನೆ. ಜೈನಧರ್ಮವೂ ಕೂಡ ಅವಿದ್ಯೆಯನ್ನು ಬಂಧನಕ್ಕೆ ಮುಖ್ಯ ಕಾರಣವೆಂದು ಮಂಡಿಸುತ್ತದೆ.

ಜೈನಧರ್ಮ ಮತ್ತು ವೇದಾಂತ ಎರಡರಲ್ಲೂ ಕರ್ಮವಾದವನ್ನು ಒಪ್ಪಿಕೊಳ್ಳಲಾಗಿದೆ. ಜೈನಧರ್ಮದಲ್ಲಿ ಕರ್ಮದ ಕೂಲಂಕಷ ವಿಶ್ಲೇಷಣೆ ಮಾಡಲಾಗಿದೆ. ಪೂರ್ವಜನ್ಮದ ಕರ್ಮದಿಂದ ಉಂಟಾಗುವ ಆತ್ಮದ ಬಂಧನವನ್ನು ಕಿತ್ತೊಗೆಯಲು ಮುಖ್ಯವಾದ ಉಪಾಯಗಳನ್ನು ಹೇಳಲಾಗಿದೆ. ಅವು ಯಾವುವೆಂದರೆ ೧. ಸಂವರ ಮತ್ತು ೨. ನಿರ್ಜರ. ಸಂವರವೆಂದರೆ ಹೊಸದಾಗಿ ಕರ್ಮಬಂಧನಗಳುಂಟಾಗುವುದನ್ನು ತಡೆಯುವುದು ಮತ್ತು ನಿರ್ಜರವೆಂದರೆ, ಹಳೆಯ ಬಂಧನಗಳನ್ನು ಕಿತ್ತೊಗೆಯುವ ಪ್ರಯತ್ನ. ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ ಮತ್ತು ಸಮ್ಯಕ್ ಚಾರಿತ್ರ್ಯ—ಇವು ನಿರ್ಜರದ ಉಪಾಯಗಳಾಗಿವೆ. ಇವು ಮೂರು ಜೈನಧರ್ಮದ "ತ್ರಿರತ್ನ"ಗಳೆಂದು ಹೇಳಲಾಗಿದೆ. ಜೈನಧರ್ಮದಲ್ಲಿ ತಪಸ್ಸಿಗೆ ಅಧಿಕ ಪ್ರಾಮುಖ್ಯವನ್ನು ಕೊಡಲಾಗಿದೆ. ಹಾಗೂ ಸಾಮಾನ್ಯವಾಗಿ ಇದನ್ನು ತ್ರಿರತ್ನಗಳ ಜೊತೆಯಲ್ಲೇ ನಾಲ್ಕನೆಯ ಮಹತ್ವಪೂರ್ಣ ಅಂಗವೆಂದು ಪರಿಗಣಿಸಲಾಗಿದೆ. ಸಮ್ಯಕ್ ದರ್ಶನವೆಂದರೆ ಸರಿಯಾದ ಸಿದ್ಧಾಂತಗಳಲ್ಲಿ ಶ್ರದ್ಧೆಯಿಡುವುದು. ಸ್ವಾಮಿ ವಿವೇಕಾನಂದರೂ ಕೂಡ ಸಾಧನೆಯಲ್ಲಿ ಶ್ರದ್ಧೆಗೆ ಅತ್ಯಂತ ಮಹತ್ವಪೂರ್ಣ ಸ್ಥಾನವನ್ನು ಕೊಡುತ್ತಾರೆ. ಜೈನಧರ್ಮದಲ್ಲಿ ಶುದ್ಧ ಗುರು, ಶುದ್ಧದೇವ ಮತ್ತು ಶುದ್ಧಧರ್ಮದಲ್ಲಿ ಇರುವ ಶ್ರದ್ಧೆಗೆ ಸಮ್ಯಕ್ ದರ್ಶನವೆಂದು ಹೇಳಲಾಗಿದೆ. ಆದರೆ ಸ್ವಾಮಿ ವಿವೇಕಾನಂದರು ತನ್ನಲ್ಲಿ ತಾನು ವಿಶ್ವಾಸವನ್ನಿಡುವುದಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಾರೆ.

ತನ್ನಲ್ಲಿ ತಾನು ವಿಶ್ವಾಸವನ್ನಿಡುವ ಮಾತನ್ನು ಜೈನಧರ್ಮವೂ ಒಪ್ಪಿಕೊಳ್ಳುತ್ತದೆ. ಆದರೆ ಜೈನಧರ್ಮವು ಜಗತ್ತಿನ ಸೃಷ್ಟಿ ಸ್ಥಿತಿ ಮತ್ತು ಪಾಲನೆಯ ಕರ್ತನಾದ ಯಾವ ಈಶ್ವರನಲ್ಲೂ ವಿಶ್ವಾಸವನ್ನಿಡುವುದಿಲ್ಲ. ಅದು (ತಮ್ಮ) ತೀರ್ಥಂಕರರನ್ನೇ ಈಶ್ವರ ಅಥವಾ ದೇವರ ರೂಪದಲ್ಲಿ ಆರಾಧಿಸುತ್ತದೆ. ಜೈನಧರ್ಮದ ಅನುಸಾರ ಯಾವುದೇ ವ್ಯಕ್ತಿ ತನ್ನ ಪುರುಷಾರ್ಥ ಹಾಗೂ ಸ್ವಪ್ರಯತ್ನದಿಂದ ತೀರ್ಥಂಕರತ್ವವನ್ನು ಪಡೆದುಕೊಳ್ಳಬಹುದು. ಈ ಮಾತು ಸ್ವಾಮಿ ವಿವೇಕಾನಂದರಿಂದ ಪ್ರಣೀತವಾದ ವೇದಾಂತಕ್ಕೆ ಅನುಗುಣವಾಗಿಯೇ ಇದೆ. ಸ್ವಾಮಿ ವಿವೇಕಾನಂದರು ತಮ್ಮ ಶಿಷ್ಯರೊಂದಿಗೆ ಹೀಗೆ ಹೇಳುತ್ತಿದ್ದರು, "ನೀವೆಲ್ಲರೂ ನನ್ನ ಸಮಾನರು ಮಾತ್ರವಲ್ಲ, ನನಗಿಂತಲೂ ಮಹಾನ್ ವ್ಯಕ್ತಿಗಳಾಗಬಹುದು" ಎಂದು.

ಜೈನಧರ್ಮದಲ್ಲಿ ಸಮ್ಯಕ್ ಚಾರಿತ್ರ್ಯಕ್ಕೆ ಅತ್ಯಂತ ಹೆಚ್ಚು ಮಹತ್ವ ಕೊಡಲಾಗಿದೆ. ಸ್ವಾಮಿ ವಿವೇಕಾನಂದರೂ ಕೂಡ ಚಾರಿತ್ರ್ಯವು ಹೆಚ್ಚು ಮಹತ್ವಪೂರ್ಣವೆಂದು ಹೇಳಿದ್ದಾರೆ. ವಸ್ತುತಃ ಚಾರಿತ್ರ್ಯ ನಿರ್ಮಾಣವೇ ಅವರ ಸಮಗ್ರ ಕಾರ್ಯಯೋಜನೆಯ ಕೇಂದ್ರಬಿಂದುವಾಗಿತ್ತು. ಅವರು ವ್ಯಕ್ತಿತ್ವ ನಿರ್ಮಾಣಕಾರಿ, ಚಾರಿತ್ರ್ಯನಿರ್ಮಾಣಕಾರಿ ಶಿಕ್ಷಣವನ್ನು ಬಯಸುತ್ತಿದ್ದರು. ಜೈನಧರ್ಮದ ಅನುಸಾರ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಈ ಐದು ಗುಣಗಳನ್ನು ಅಣುವ್ರತ ಅಥವಾ ಮಹಾವ್ರತದ ರೂಪದಲ್ಲಿ ಪಾಲಿಸುವುದು ಚಾರಿತ್ರ್ಯ ನಿರ್ಮಾಣದ ಭೂಮಿಕೆ. ಈ ಐದು ಸದ್ಗುಣಗಳನ್ನು ಪಾತಂಜಲ ಯೋಗಸೂತ್ರದಲ್ಲಿ "ಯಮ" ಎಂದು ಕರೆಯಲಾಗಿದೆ, ಹಾಗೂ ಇವು ಸಾರ್ವಭೌಮಿಕ ರೂಪದಲ್ಲಿ ಸರ್ವತ್ರ ಸರ್ವರಿಗಾಗಿ ಇವೆ. ಸ್ವಾಮಿ ವಿವೇಕಾನಂದರೂ ಕೂಡ ಇದನ್ನು ಪ್ರತಿಪಾದಿಸಿದ್ದಾರೆ. ನಿಜವಾಗಿ, ವಿವೇಕಾನಂದಪ್ರಣೀತ ವೇದಾಂತಕ್ಕೂ ಜೈನಧರ್ಮಕ್ಕೂ ಮೂಲಭೂತವಾದ ಮತಭೇದಕ್ಕೆ ಎಡೆಯೇ ಇಲ್ಲ. ಆದರೆ ಯಾವುದಾದರೂ ವಿಶೇಷ ಭಾವನೆಗೆ ಹೆಚ್ಚು ಮಹತ್ವವನ್ನು ಕೊಡುವುದರಲ್ಲಿ ಅಥವಾ ಕೊಡದಿರುವುದರಲ್ಲಿ ಅಂತರವಿರಬಹುದು. ಜೈನಧರ್ಮದಲ್ಲಿ ಅಹಿಂಸೆಗೆ ವಿಶೇಷವಾದ ಮಹತ್ವವನ್ನು ಕೊಟ್ಟಿದ್ದರೆ, ಸ್ವಾಮಿ ವಿವೇಕಾನಂದರು ಸತ್ಯ ಮತ್ತು ಬ್ರಹ್ಮಚರ್ಯಕ್ಕೆ ಹೆಚ್ಚು ಪ್ರಾಮುಖ್ಯವನ್ನು ಕೊಟ್ಟಿದ್ದಾರೆ.

ಸಮ್ಯಕ್ ಜ್ಞಾನಕ್ಕೆ ವೇದಾಂತದಲ್ಲಿ ವಿಶೇಷವಾದ ಮಹತ್ವವನ್ನು ಕೊಡಲಾಗಿದೆ. ಜ್ಞಾನದಿಂದ ಮಾತ್ರವೇ ಅಜ್ಞಾನದ ನಾಶ ಸಾಧ್ಯ. ವೇದಾಂತದಲ್ಲಿ, ಮುಖ್ಯವಾಗಿ ಜ್ಞಾನಯೋಗದಲ್ಲಿ, ಜ್ಞಾನವನ್ನು ಪಡೆದುಕೊಳ್ಳುವುದೇ ಮುಖ್ಯ ಗುರಿಯಾಗಿದೆ. ಈ ವಿಷಯದಲ್ಲಿ ಜೈನಧರ್ಮ ಹಾಗೂ ವೇದಾಂತದಲ್ಲಿ ಸ್ವಲ್ಪ ಅಂತರವಿದೆ. ಅದ್ವೈತ ವೇದಾಂತದ ಅನುಸಾರ ಜೀವಾತ್ಮ ಮತ್ತು ವಿಶ್ವಾತ್ಮ ಅಥವಾ ಬ್ರಹ್ಮ ವಸ್ತುತಃ ಒಂದೇ. ಆದರೆ ಜೈನಧರ್ಮವು ಜೀವ ಅನೇಕವೆಂದೂ ಈ ಅನೇಕತೆಯು ಯಾವಾಗಲೂ ಇರುವುದೆಂದೂ ನಂಬುತ್ತದೆ. ಪ್ರತ್ಯೇಕ ಜೀವಿಯು ವಿಶುದ್ಧ ಸ್ಥಿತಿಯಲ್ಲಿ ಶುದ್ಧ ಬುದ್ಧ ನಿತ್ಯ ಮುಕ್ತ ಸ್ವಭಾವವುಳ್ಳದ್ದು ಎಂಬುದಂತೂ ಖಂಡಿತ ಸತ್ಯ.

ಜ್ಞಾನಯೋಗದ ಮುಖ್ಯಸಾಧನೆಗಳು—"ತ್ವಂ" ಹಾಗೂ "ತತ್" ಪದಗಳ ಶೋಧನೆ. ತ್ವಂ ಪದದ ಶೋಧನೆಯ ಅರ್ಥ—ತನ್ನ ವ್ಯಕ್ತಿತ್ವದ ಸೀಮಿತ ಸ್ವರೂಪದ ಅನ್ವೇಷಣೆ. ಇದು "ನಾನು ಯಾರು" ಎಂದು ತಿಳಿದುಕೊಳ್ಳುವ ಪ್ರಯತ್ನವೇ ಆಗಿದೆ. ಹೀಗೆ ವಿಚಾರ ಮಾಡುತ್ತಾ ಮಾಡುತ್ತಾ ವ್ಯಕ್ತಿಯು ತನ್ನನ್ನು, ದೇಹ, ಮನಸ್ಸು, ಪ್ರಾಣ, ಬುದ್ಧಿ, ಅಹಂಕಾರ, ಇತ್ಯಾದಿಗಳಿಂದ ಭಿನ್ನವೆಂದು ಭಾವಿಸುತ್ತಾ ಕೊನೆಗೆ ಇವುಗಳೆಲ್ಲದರಿಂದಲೂ ಭಿನ್ನವಾದ ತನ್ನ ಶುದ್ಧಸ್ವರೂಪದ ಪರಿಚಯ ಮಾಡಿಕೊಳ್ಳುತ್ತಾನೆ. ಈ ಪ್ರಕ್ರಿಯೆಯವರೆಗೂ ವೇದಾಂತ ಮತ್ತು ಜೈನಧರ್ಮದಲ್ಲಿ ಯಾವ ಮತಭೇದವೂ ಇಲ್ಲ.

ಸಾಧನೆಯ ದೃಷ್ಟಿಯಿಂದ ನೋಡಿದರೆ ಜೈನಧರ್ಮವು ನಿವೃತ್ತಿಗೆ ಸಂಬಂಧಪಟ್ಟ ಧ್ಯಾನವನ್ನು ಪ್ರಧಾನವಾಗಿ ಬೋಧಿಸಿದೆ. ಅದರಲ್ಲಿ ಧ್ಯಾನಕ್ಕೆ ವಿಶೇಷವಾದ ಮಹತ್ವವನ್ನು ಕೊಡಲಾಗಿದೆ. ಸಾಮಾನ್ಯ

ವಾಗಿ ಕಾಣಬರುವ ತೀರ್ಥಂಕರರ ಹಾಗೂ ಅನೇಕಾನೇಕ ಜೈನ ಸಂತರ ಮೂರ್ತಿಗಳನ್ನು, ಪದ್ಮಾಸನದಲ್ಲಿ ಕುಳಿತಿರಲಿ ಅಥವಾ ನಿಂತಿರಲಿ, ಧ್ಯಾನಸ್ಥ ಮುದ್ರೆಯಲ್ಲಿ ತೋರಿಸಲಾಗಿದೆ. ಸ್ವಾಮಿ ವಿವೇಕಾನಂದರೂ ಕೂಡ ತಮ್ಮ ಅನುಷ್ಠಾನ ವೇದಾಂತದ ಯೋಜನೆಯಲ್ಲಿ ಧ್ಯಾನಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾರೆ. ಅವರು ಸ್ವತಃ ಒಬ್ಬ ಧ್ಯಾನಸಿದ್ಧ ಯೋಗಿಗಳಾಗಿದ್ದರು, ಹಾಗೂ ಎಲ್ಲ ಕ್ಷೇತ್ರಗಳಲ್ಲೂ ಸಫಲತೆಯನ್ನು ಸಾಧಿಸಬೇಕಾದರೆ ಮನಸ್ಸಿನ ಏಕಾಗ್ರತೆಯನ್ನು ಪಡೆದುಕೊಳ್ಳುವುದೇ ಎಲ್ಲಕ್ಕಿಂತ ಮಹತ್ತ್ವಪೂರ್ಣವಾದ ಅಂಶವೆಂದು ನಂಬಿದ್ದರು. ಜೈನಧರ್ಮದಲ್ಲಿ ಅನೇಕ ಪ್ರಕಾರದ ಧ್ಯಾನಗಳನ್ನು ತಿಳಿಸಲಾಗಿದೆ, ಹಾಗೂ ಹಿಂದಿನಿಂದಲೂ ಇಂತಹ ವಿಧಿಗಳು ಪ್ರಚಲಿತವಾಗಿವೆ. ಇವುಗಳು ಚಂಚಲ ಮನಸ್ಸನ್ನು ಏಕಾಗ್ರಗೊಳಿಸಲು ಬಹಳ ಸಹಾಯಕಾರಿಯಾಗಿವೆ.

ಜೈನಧರ್ಮದಲ್ಲಿ ಎರಡು ಮಹತ್ತ್ವಪೂರ್ಣ ಆದರೆ ಪರಸ್ಪರ ಸಂಬಂಧಿತ ಸಿದ್ಧಾಂತಗಳಿವೆ—ಅನೇಕಾಂತವಾದ ಮತ್ತು ಸ್ಯಾದ್ವಾದ. ಇವುಗಳು ಜೈನಧರ್ಮವನ್ನು ಉದಾರ ಹಾಗೂ ವಿಶಾಲವಾಗುವಂತೆ ಮಾಡಿವೆ. ಇದರ ಅನುಸಾರ ಯಾವುದೇ ವಸ್ತು ಅಥವಾ ಸ್ಥಿತಿಯ ಅವಲೋಕನದ ಹಲವು ದೃಷ್ಟಿಕೋನಗಳಿರಬಹುದು. ಇವು ಸಂದರ್ಭಕ್ಕೆ ಅನುಸಾರವಾಗಿ ಸತ್ಯವೆನಿಸುತ್ತವೆ. ಆದರೆ ಈ ಎಲ್ಲ ಸತ್ಯಗಳೂ ಆಂಶಿಕ ಸತ್ಯವಾಗುವುವೇ ವಿನಃ ಪೂರ್ಣ ಸತ್ಯವಾಗುವುದಿಲ್ಲ. ಹೇಗೆಂದರೆ ಅನೇಕ ಕುರುಡರು ಆನೆಯ ವಿಭಿನ್ನ ಅವಯವಗಳನ್ನು ಮುಟ್ಟಿ ನೋಡಿ ಅವರ ಮನ ಬಂದಂತೆ ವಿವಿಧ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಆದರೆ ಇವುಗಳೆಲ್ಲವೂ ಆಂಶಿಕ ಸತ್ಯವಾಗಿದ್ದರೂ ಪೂರ್ಣಸತ್ಯವಾಗಲು ಸಾಧ್ಯವಿಲ್ಲ. ಹೀಗೆಯೇ ವಿಭಿನ್ನ ಮತವಾದಿಗಳು ಸತ್ಯದ ಬಗ್ಗೆ ಬೇರೆ ಬೇರೆ ಸಿದ್ಧಾಂತಗಳನ್ನು ಪ್ರಸ್ತುತಗೊಳಿಸುತ್ತಾರೆ. ಅವು ಆಂಶಿಕ ರೂಪದಿಂದ ಸತ್ಯವಾಗಿದ್ದರೂ ಕೂಡ, ಪೂರ್ಣಸತ್ಯವಾಗಿರುವುದಿಲ್ಲ. ಅನೇಕಾಂತವಾದವನ್ನು ಸ್ವೀಕರಿಸುವವನು ಎಂದೂ ಅನುದಾರಿಯಾಗಲು ಸಾಧ್ಯವಿಲ್ಲ. ಈ ಸಿದ್ಧಾಂತವು ಶ್ರೀರಾಮಕೃಷ್ಣರ "ಜತೋ ಮತ್ ತತೋ ಪಥ್" (ಎಲ್ಲಾ ಮತಗಳೂ ವಿವಿಧ ಪಥಗಳು) ಸಿದ್ಧಾಂತವನ್ನು ಬಹಳವಾಗಿ ಹೋಲುತ್ತದೆ. ಈಶ್ವರನಿಗೆ ಅನೇಕ ರೂಪಗಳಿರಬಹುದು. ಆದರೂ ಆತ ನಿರಾಕಾರನೂ ಆಗಲೂ ಸಾಧ್ಯ ಎಂಬುದನ್ನು ಶ್ರೀರಾಮಕೃಷ್ಣರು ಅನೇಕ ಉದಾಹರಣೆಗಳ ಮೂಲಕ ತಿಳಿಸಲು ಪ್ರಯತ್ನಿಸುತ್ತಿದ್ದರು. ಇಷ್ಟೇ ಅಲ್ಲದೆ ಅವನನ್ನು ಪಡೆಯಲು ಅನೇಕ ಮಾರ್ಗಗಳಿವೆ, ಹಾಗೂ ಅವು ಸತ್ಯ ಮತ್ತು ಪರಿಣಾಮಕಾರಿಯಾಗಿವೆ. ಮತವಾದದ ಬಗ್ಗೆ ಕಾದಾಟ ವ್ಯರ್ಥ. ನಮ್ಮ ಮತವನ್ನು ನಿಷ್ಠೆಯಿಂದ ಹಿಡಿದು ಬೇರೆಯವರ ಮತವನ್ನು ನಿಂದಿಸದಿದ್ದರೆ ಸಾಕು.

## ಅನುಷ್ಠಾನ ವೇದಾಂತ ಮತ್ತು ಜೈನಧರ್ಮ

ಆಧುನಿಕ ಯುಗದಲ್ಲಿ ಸ್ವಾಮಿ ವಿವೇಕಾನಂದರು ವೇದಾಂತಕ್ಕೆ ಒಂದು ಹೊಸ ದಿಕ್ಕನ್ನು ನೀಡಿದ್ದಾರೆ. ಅದನ್ನು "ಅನುಷ್ಠಾನ ವೇದಾಂತ" ಎಂದು ಹೆಸರಿಸಲಾಗಿದೆ. ಮೊಟ್ಟಮೊದಲನೆಯದಾಗಿ ಅವರು ಧರ್ಮಕ್ಕೆ ಒಂದು ಹೊಸ ಪರಿಭಾಷೆಯನ್ನು ನೀಡಿದ್ದಾರೆ:

"ಪ್ರತಿಯೊಂದು ಆತ್ಮವು ಸ್ವರೂಪತಃ ದಿವ್ಯವಾದುದು. ತನ್ನ ಬಾಹ್ಯ ಮತ್ತು ಆಂತರಿಕ ಪ್ರಕೃತಿಗಳನ್ನು ನಿಗ್ರಹಿಸಿ, ದಿವ್ಯತ್ವವನ್ನು ವ್ಯಕ್ತಪಡಿಸಿ ಮುಕ್ತಿ ಹೊಂದುವುದೇ ಜೀವನದ ಗುರಿಯಾಗಿದೆ. ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಹಾಗೂ ರಾಜಯೋಗ ಇವುಗಳಲ್ಲಿ ಯಾವುದಾದರೂ ಒಂದು ಅಥವಾ ಎಲ್ಲವನ್ನು ಉಪಯೋಗಿಸಿಕೊಂಡು ಸಾಧನೆ ಮಾಡಿ ಮುಕ್ತಿ ಹೊಂದಿ. ಇದೇ ಧರ್ಮದ ಸಾರಸರ್ವಸ್ವ. ಗ್ರಂಥ, ಮತ, ದೇವಸ್ಥಾನ, ಕ್ರಿಯಾವಿಧಿ ಮುಂತಾದವುಗಳು ಗೌಣ."

ಸ್ವಾಮಿ ವಿವೇಕಾನಂದರಿಂದ ಪ್ರಣೀತವಾದ ಇಂತಹ ವೇದಾಂತ ಸಿದ್ಧಾಂತಗಳೊಂದಿಗೆ ಜೈನಧರ್ಮದ ಸಿದ್ಧಾಂತಗಳ ಮತಭೇದವಾಗುವುದು ಸಾಧ್ಯವಿದೆಯೇ? ಏಕೆಂದರೆ ನಾವು ಮೊದಲೇ ನೋಡಿದ ಹಾಗೆ, ಜೈನದರ್ಮವೂ ಕೂಡ ಆತ್ಮದ ದಿವ್ಯತ್ವವನ್ನು ಒಪ್ಪಿಕೊಂಡಿದೆ ಮತ್ತು ಅದರ ಮುಕ್ತಿಯೇ ಜೀವನದ ಲಕ್ಷ್ಯವೆಂದು ತಿಳಿದಿದೆ. ಜೈನಧರ್ಮದಲ್ಲಿ ರಾಜಯೋಗ ಪದ್ಧತಿಗೇ ಹೆಚ್ಚು ಮಹತ್ವ ಕೊಟ್ಟಿರುವುದನ್ನೂ ನಾವು ನೋಡಿದ್ದೇವೆ. ಮಂದಿರಮಾರ್ಗ ಹಾಗೂ ದಿಗಂಬರ ಜೈನಸಂಪ್ರದಾಯಗಳಲ್ಲಿ ಭಕ್ತಿಯನ್ನು ಒಂದು ಸಾಧನ ಪದ್ಧತಿಯೆಂದು ಪರಿಗಣಿಸಲಾಗಿದೆ. ಮಂದಿರಗಳಲ್ಲಿ ಮೂರ್ತಿಪೂಜೆ, ಭಗವತ್-ಆರಾಧನೆ, ಸ್ತೋತ್ರಪಾಠ ಇತ್ಯಾದಿ ಆಚರಣೆಗಳು ಜಾರಿಯಲ್ಲಿವೆ. ಜೈನ ಭಕ್ತರಿಗೆ ಇದರಿಂದ ಹೆಚ್ಚು ಉಪಯೋಗವಾಗಿದೆ. ಜೈನಧರ್ಮದಲ್ಲಿ ಸಾಕಷ್ಟು ಜ್ಞಾನವಿಚಾರಗಳಿಗೆ ಪ್ರಾಶಸ್ತ್ಯ ನೀಡಲಾಗಿದೆ ಹಾಗೂ ಜೈನಧರ್ಮವು ಪ್ರಕಾಂಡ ಪಂಡಿತರಿಗೆ ಜನ್ಮ ನೀಡಿದೆ. ಜೈನಸಾಹಿತ್ಯದ ಒಂದು ಅತಿ ವಿಶಾಲವಾದ ಭಂಡಾರವಿದೆ.

ಇನ್ನು ಕರ್ಮಯೋಗದ ಬಗ್ಗೆ ಹೇಳುವುದಾದರೆ, ಭಗವದ್ಗೀತೆಯಲ್ಲಿ ಕರ್ಮಯೋಗಕ್ಕೆ ಕೊಟ್ಟಿರುವಂತಹ ಪ್ರಮುಖ ಸ್ಥಾನವನ್ನು ಜೈನಧರ್ಮದಲ್ಲಿ ಕೊಟ್ಟಿಲ್ಲ. ಸ್ವಾಮಿ ವಿವೇಕಾನಂದರ ಅನುಷ್ಠಾನ ವೇದಾಂತದ ಮೂಲೋದ್ದೇಶ : ಶಿವ-ಜ್ಞಾನದಿಂದ ಜೀವಸೇವೆ. ಜೈನಧರ್ಮದಲ್ಲೂ ಸೇವೆಗೆ "ವೈಯಾವೃತ್ತ" ಎಂಬ ಒಂದು ತಪಸ್ಸಿನ ಸ್ಥಾನವನ್ನು ಕೊಡಲಾಗಿದೆ. ಇಂತಹ ಸೇವೆಯು ಸಾಮಾನ್ಯವಾಗಿ ಜೈನ ಸಾಧ್ವಿಯರಿಗೆ ಮಾತ್ರ ಸೀಮಿತಗೊಂಡಿರುತ್ತದೆ. ಜೈನಧರ್ಮದಲ್ಲಿ ಎಲ್ಲ ಪ್ರಕಾರದ ಕರ್ಮಗಳನ್ನು ಬಂಧನಕ್ಕೆ ಕಾರಣವೆಂದು ಪರಿಗಣಿಸುತ್ತಾರೆ. ಆದರೂ ಗೃಹಸ್ಥರಿಂದ ಮಾಡಲಾಗುವ ದಾನಾದಿ ಕ್ರಿಯೆಗಳನ್ನು ಶ್ರೇಷ್ಠ ಕರ್ಮಗಳೆಂದು ಪರಿಗಣಿಸಲಾಗಿದೆ. ಕರ್ಮದ ಮೂಲಕ ಚಿತ್ತಶುದ್ಧಿಗೆ ಮಹತ್ತ್ವವನ್ನು ಕೊಟ್ಟಿಲ್ಲ. "ನಿರ್ಜರ"ದ ಮುಖ್ಯ ಸಾಧನ ತಪಸ್ಸು, ಕರ್ಮವಲ್ಲ.

ಸ್ವಾಮಿ ವಿವೇಕಾನಂದರು ಕ್ರಿಯಾವಿಧಿ, ಮತವಾದ, ಮಂದಿರ ಮುಂತಾದವುಗಳನ್ನು ಹೇಗೆ ಧರ್ಮದ ಗೌಣ ಅಂಗಗಳೆಂದು

ತಿಳಿಸಿದರೋ, ಹಾಗೆಯೇ ಜೈನಧರ್ಮವೂ ಕೂಡ ಬಾಹ್ಯಾಚಾರಣೆಗಿಂತ ಆಂತರಿಕ ಭಾವಕ್ಕೇ ಹೆಚ್ಚು ಮಹತ್ವವನ್ನು ಕೊಡುತ್ತದೆ.ಇದನ್ನು ಜೈನಧರ್ಮದಲ್ಲಿ"ವ್ಯವಹಾರನಯ" (ಒಳ್ಳೆಯ ವ್ಯವಹಾರ) ಮತ್ತು "ನಿಶ್ಚಯನಯ" (ಒಳ್ಳೆಯ ನಿಶ್ಚಯ) ಎಂದು ಕರೆಯುತ್ತಾರೆ. ಒಬ್ಬ ವ್ಯಕ್ತಿಯ ವ್ಯವಹಾರ ಎಷ್ಟೇ ಒಳ್ಳೆಯದಾಗಿದ್ದರೂ ಅವನ ಉದ್ದೇಶ ಕೆಟ್ಟದಾಗಿದ್ದರೆ ಅದು ಶುಭಕರ್ಮವಾದರೂ ಪ್ರಭಾವಶಾಲಿಯಾಗಿರುವುದಿಲ್ಲ. ಈ ಸಿದ್ಧಾಂತವು ವೇದಾಂತದ ಕರ್ಮಯೋಗಕ್ಕೆ ಹೆಚ್ಚು ಹೊಂದಿಕೆಯಾಗುತ್ತದೆ. ಅದರಲ್ಲಿ ಹೀಗೆ ಹೇಳಲಾಗಿದೆ : "ನಿರ್ಲಿಪ್ತನಾಗಿ ಕರ್ಮಮಾಡುವ ವ್ಯಕ್ತಿ ಕರ್ಮಫಲದಿಂದ ಪ್ರಭಾವಿತನಾಗುವುದಿಲ್ಲ." ಜೈನ ಧರ್ಮದಲ್ಲಿ ಅಹಿಂಸೆಗೆ ಸಂಬಂಧಿಸಿದಂತೆ ಎರಡು ಪ್ರಕಾರಗಳಿವೆ. ಅವು "ದ್ರವ್ಯಹಿಂಸೆ" ಮತ್ತು "ಭಾವಹಿಂಸೆ" ಅಥವಾ ಮಾನಸಿಕ ವಿದ್ವೇಷ. ಇದರಲ್ಲಿ ಭಾವಹಿಂಸೆಯೇ ಹೆಚ್ಚು ಕೆಟ್ಟದ್ದೆಂದು ಹೇಳಲಾಗಿದೆ.

ಸ್ವಾಮಿ ವಿವೇಕಾನಂದರು ಅದ್ವೈತ ವೇದಾಂತವನ್ನು ನೈತಿಕತೆಯ ಬುನಾದಿಯನ್ನಾಗಿಸಿದರು. ಅವರ ಅನುಸಾರ, ನಾವು ಇನ್ನೊಬ್ಬರ ಸೇವೆ ಏಕೆ ಮಾಡಬೇಕೆಂದರೆ ಆ ವ್ಯಕ್ತಿಯೂ ನಮ್ಮಿಂದ ಬೇರೆ ಅಲ್ಲ. ಆದ್ದರಿಂದ ನಾವು ಯಾರಿಗೂ ಕಷ್ಟ ಕೊಡಬಾರದು, ಏಕೆಂದರೆ ಅದು ತನಗೇ ಕಷ್ಟ ಕೊಟ್ಟಂತೆ ಆಗುತ್ತದೆ. ಭಗವಾನ್ ಮಹಾವೀರರೂ ಕೂಡ ಇದೇ ಮಾತನ್ನು ಹೇಳಿದ್ದಾರೆ: "ಯಾರನ್ನು ನೀನು ಕೊಲ್ಲಬೇಕೆಂದಿರುವೆಯೋ ಅದು ನೀನೇ ಆಗಿದ್ದೀಯೆ. ಯಾರನ್ನು ನೀನು ಬಂಧನದಲ್ಲಿಡಬೇಕೆಂದು ಬಯಸುವೆಯೋ ಅದೂ ನೀನೇ ಆಗಿರುವೆ. ಯಾವುದಾದರೂ ಜೀವಿಯನ್ನು ನೀನು ಕೊಲ್ಲುವುದೆಂದರೆ ನಿನ್ನನ್ನೇ ಕೊಂದಂತೆ. ಪ್ರಾಣಿಗಳಿಗೆ ದಯೆ ತೋರಿಸುವುದು ತನಗೇ ದಯೆ ತೋರಿಸಿದಂತಾಗುವುದು." ಭಗವಾನ್ ಮಹಾವೀರರ ಈ ಸಿದ್ಧಾಂತ ಅದ್ವೈತ ವೇದಾಂತದ ಸಂಕೇತವಾಗಿದೆ.

## ಉಪಸಂಹಾರ

ವೇದಾಂತವು ಅತಿ ಪ್ರಾಚೀನವಾಗಿದ್ದರೂ ಕೂಡ, ಸ್ವಾಮಿ ವಿವೇಕಾನಂದರಿಂದ ಪ್ರತಿಪಾದಿತವಾದ "ವ್ಯಾವಹಾರಿಕ ಜೀವನದಲ್ಲಿ ವೇದಾಂತ" ಸಿದ್ಧಾಂತವು ತುಂಬ ನವೀನವಾದುದು. ಸ್ವಾಮಿ ವಿವೇಕಾನಂದರು ಪುರಾತನ ವೇದಾಂತಕ್ಕೆ ಆಧುನಿಕ ಯುಗಕ್ಕನುಗುಣವಾಗಿ ಒಂದು ಹೊಸ ವ್ಯಾಖ್ಯೆಯನ್ನು ನೀಡಿದ್ದಾರೆ ಎಂದು ಹೇಳುವುದು ವಾಸ್ತವವಾಗಿ ಉಚಿತವೆನಿಸುತ್ತದೆ. ಮೇಲೆ ಹೇಳಿದ ವಿಶ್ಲೇಷಣೆಯಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ಪರಂಪರಾಗತ ಹಿಂದೂಧರ್ಮದೊಂದಿಗೆ ವ್ಯಾವಹಾರಿಕ ಮತ್ತು ಸೈದ್ಧಾಂತಿಕವಾಗಿ ಜೈನಧರ್ಮದ ಮತಭೇದಗಳಿದ್ದರೂ ಕೂಡ ವ್ಯಾವಹಾರಿಕ ವೇದಾಂತದೊಂದಿಗೆ ಅದರ ಸಮಾನತೆಗಳೆ ಹೆಚ್ಚು ಮತ್ತು ಮತಭೇದಗಳು ಕಡಿಮೆ. ಸ್ವಾಮಿ ವೇಕಾನಂದರಿಂದ ಪ್ರಣೀತವಾದ ವೇದಾಂತವು ಅತ್ಯಂತ ವ್ಯಾಪಕವಾಗಿದೆ. ಇದರ ಅನುಸಾರ ಧರ್ಮದ ಅರ್ಥ ವೇದಾಂತವೇ ಆಗಿದೆ ಮತ್ತು ವೇದಾಂತದ ಈ ವ್ಯಾಪಕ ಪ್ರವಾಹದಲ್ಲಿ ಜೈನ, ಕ್ರೈಸ್ತ, ಬೌದ್ಧ, ಮುಸಲ್ಮಾನ—ಎಲ್ಲ ಧರ್ಮಗಳು ಒಂದಾಗಿಬಿಡುತ್ತವೆ. ಇಂತಹ ವ್ಯಾಪಕವಾದ ಪರಿಭಾಷೆಯನ್ನು ಒಪ್ಪಿಕೊಳ್ಳದಿದ್ದರೂ ನಾವು ಮೊದಲೇ ಹೇಳಿದ ಹಾಗೆ ಜೈನಧರ್ಮ ಮತ್ತು ವೇದಾಂತದಲ್ಲಿ ಸಾಕಷ್ಟು ಸಮಾನತೆಗಳಿವೆ. ಇಷ್ಟೇ ಅಲ್ಲದೆ ಎರಡೂ ಪದ್ಧತಿಗಳು ಪರಸ್ಪರ ಸಹಾಯಕ ಮತ್ತು ಪರಿಪೂರಕವಾಗಲೂಬಹುದು. ಹಾಗೆ ಆಗಲೇಬೇಕಾಗಿದೆ. ವೇದಾಂತವು ಜೈನಧರ್ಮದಿಂದ ಸ್ವಲ್ಪ ಕಲಿಯಬಹುದು ಮತ್ತು ಜೈನಧರ್ಮವು ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ವೇದಾಂತದಿಂದ ಉಪಯೋಗ ಪಡೆದುಕೊಳ್ಳಬಹುದು.

ಉದಾಹರಣೆಗೆ ಅನುಷ್ಠಾನ ವೇದಾಂತದ "ಶಿವಜ್ಞಾನದಿಂದ ಜೀವಸೇವೆ"ಯ ಸಿದ್ಧಾಂತವನ್ನು ಜೈನಧರ್ಮವು ಸುಲಭವಾಗಿ ಅಳವಡಿಸಿಕೊಳ್ಳಬಹುದು. ಏಕೆಂದರೆ ಅದು ಆತ್ಮಚೈತನ್ಯದ ನಿತ್ಯ, ಶುದ್ಧ, ಬುದ್ಧ ಸ್ವರೂಪದಲ್ಲಿ ಮೊದಲೇ ವಿಶ್ವಾಸವನ್ನಿಟ್ಟಿದೆ. ಇನ್ನೊಂದು ಕಡೆ, ಆಧುನಿಕ ಅನುಷ್ಠಾನ ವೇದಾಂತವಾದಿಗಳು ಜೈನಧರ್ಮ ತಪಸ್ಸಿಗೆ ಕೊಟ್ಟ ಮಹತ್ವದಿಂದ ಲಾಭ ಪಡೆಯಬಹುದಾಗಿದೆ. ಕ್ಷಮಾಪಣೆ ಹಾಗೂ ಸ್ತೋತ್ರ ಮಂತ್ರಗಳ ಅಧಿಕ ವ್ಯಾಪಕವಾದ ಉಪಯೋಗವನ್ನು ಜೈನೇತರ ವೇದಾಂತಿಗಳೂ ಕೂಡ ಪಡೆದುಕೊಳ್ಳಬಹುದಾಗಿದೆ. "ಸಂವತ್ಸರಿ"ಯ ದಿನ ಎಲ್ಲ ಜೈನರು ಜಗತ್ತಿನ ಎಲ್ಲ ಜೀವಿಗಳಿಂದ ಕ್ಷಮೆ ಯಾಚಿಸುತ್ತಾರೆ ಹಾಗೂ ತಾವೇ ಸ್ವತಃ ಹೀಗೆ ಹೇಳುತ್ತಾ ಎಲ್ಲರನ್ನೂ ಕ್ಷಮಿಸುತ್ತಾರೆ:

ಖಮ್ಯಾಮಿ ಸವ್ವೇ ಜೀವೇಸು, ಸವ್ವೇ ಜೀವಾ ಖಿಮಯನ್ತು ಮೇ।
ಮಿತ್ತಿ ಮೆ ಸವ್ವ ಭೂದೇಸು, ವೇರಂ ಮೇ ನ ಕೇ ನ ಪಿ ॥

ಅಂದರೆ, "ನಾನು ಎಲ್ಲ ಜೀವಿಗಳನ್ನೂ ಕ್ಷಮಿಸುತ್ತೇನೆ. ಎಲ್ಲ ಜೀವಿಗಳೂ ನನ್ನನ್ನು ಕ್ಷಮಿಸಲಿ. ನನಗೆ ಎಲ್ಲರೊಂದಿಗೂ ಮೈತ್ರಿಯಿದೆ, ಯಾರೊಂದಿಗೂ ವೈರವಿಲ್ಲ."

ನವಕಾರ (ಸ್ತೋತ್ರ) ಮಂತ್ರವೂ ಒಂದು ಅತಿ ಸುಂದರವಾದ, ಪ್ರಭಾವಶಾಲಿಯಾದ ಹಾಗೂ ಉದಾರವಾದ ಮಂತ್ರವಾಗಿದೆ. ಅದರಲ್ಲಿ ವಿಶ್ವದ ಎಲ್ಲ ಸಂತರು, ಉಪಾಧ್ಯಾಯರು, ಆಚಾರ್ಯರು, ತೀರ್ಥಂಕರರು, ಅವತಾರಿಗಳು, ಪೈಗಂಬರರು ಹಾಗೂ ಸಿದ್ಧ ಮುಕ್ತಾತ್ಮರಿಗೆ ಪ್ರಣಾಮಗಳನ್ನು ಅರ್ಪಿಸಲಾಗಿದೆ. ಇಂತಹ ಶುಭ ಮಂತ್ರವನ್ನು ಗ್ರಹಿಸುವುದರಲ್ಲಿ ವೇದಾಂತಿಗಳಿಗೆ ಏನೂ ಅಭ್ಯಂತರವಿರಲು ಸಾಧ್ಯವಿಲ್ಲ.

ನಿಜವಾದ ಧರ್ಮವು ಮತಭೇದವನ್ನು ಕಲಿಸುವುದಿಲ್ಲ. ಅದು ಜೀವಿಗಳನ್ನು ಒಂದುಗೂಡಿಸುತ್ತದೆ. ಇದೇ ವೇದಾಂತ ಮತ್ತು ಜೈನಧರ್ಮದ ಉದ್ದೇಶವಾಗಿದೆ. ಇದೇ ಕಾರಣದಿಂದಲೇ ಭಾರತದಲ್ಲಿ ಜೈನಧರ್ಮ ಮತ್ತು ಆಧುನಿಕ ನವ-ವೇದಾಂತವಾದಿಗಳ ನಡುವೆ ಎಂದೆಂದಿಗೂ ಮೈತ್ರಿ ಹಾಗೂ ಸದ್ಭಾವನೆ ಇದ್ದೇ ಇದೆ ಮತ್ತು ಅದು ನಿರಂತರವಾಗಿ ಹೆಚ್ಚುತ್ತಿದೆ.

ಸ್ಥಳದಾನ: ನಿತಿನ್ ಆಟೋಮೊಬೈಲ್ಸ್, ಬೆಂಗಳೂರು